Regd. No M. 1299 SATYAVADI Founded 1917

ಸತ್ಯವಾದಿ

(ಅರಮನೆ ಸರಸ್ವೇದಾರ್ ಎಂ. ವಿ. ಸುಬ್ಬರಾಯುರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 30 ಸಂಚಿಕೆ 269 | ಶನಿವಾರ 21—6—47 | ಬಿಡಿ ಪ್ರತಿ 3 ಪೈ

ಹಿಂದೂ ದೇಶದ ವಿಭಜನೆ ಅಂತರ್ಯುದ್ಧಗಳಾಗುವ ಸಂಭವ

—

ಪಾಕೀಸ್ತಾನದಲ್ಲಿ ಹಿಂದುಗಳಿಗೆ ಕಷ್ಟವನ್ನೂ ಕೊಟ್ಟರೆಂದು ಹಿಂದೂಸ್ತಾನ್ ಸರ್ಕಾರವೂ ಹಿಂದೂಸ್ತಾನದಲ್ಲಿ ಮುಸ್ಲಿಂರಿಗೆ ತೊಂದರೆಗಳುಂಟಾಗಿರುವವೆಂದು ಪಾಕಿಸ್ತಾನ ಸರ್ಕಾರವೂ ಎಷ್ಟೋ ಸ್ವಲ್ಪ ಪ್ರಮಾಣದಲ್ಲಿ ಲೋಪಬಂದರೂ ಕಚ್ಚಾಡಿಕೊಳ್ಳುವರು. ಅದು ಕೊನೆಗೆ ಎರಡು ದೇಶಗಳಿಗೂ ಯುದ್ಧರೂಪವಾಗಿ ಪರಿಣಮಿಸುತ್ತದೆ. ಆದ್ದರಿಂದ ದೇಶ ವಿಭಜನೆಯು ಲಾಭದಾಯಕವಲ್ಲ. ದೇಶವು ಅವಿಭಾಜ್ಯವಾಗಿರುವಿಕೆಯೂ ಅದರಲ್ಲಿ ಯಾವ ವರ್ಗಕ್ಕೆ ಅಪಕಾರವು ಸಂಭವಿಸಿದರೂ ಪ್ರಜಾಸ್ವಾಮಿಕ ಪದ್ಧತಿಗಳನ್ನು ತೀರಿಸಿಕೊಳ್ಳುವಿಕೆಯೂ ಸರಿಯಾದ ಮಾರ್ಗವಾಗಿರುತ್ತದೆ.

(ವಾ. ಭೂ.)

—

ಲಂಡನ್ ಜೂನ್ 19 — ಸಯಾಮಿನಲ್ಲಿ ಅಧಿಕ ಪ್ರಮಾಣದಲ್ಲಿ ಅಕ್ಕಿ ಸಂಗ್ರಹವಾಗಿದೆಯೆಂಬ ವರದಿ ಸರಿಯಲ್ಲವೆಂದು ಬ್ರಿಟಿಷ್ ಕಾಲನಿಗಳ ಮಂತ್ರಿ ವಿ|| ಕ್ರೀಚ್ ಜೋನ್ಸರು ತಿಳಿಸಿದರು.

ಕಾಕ್ಸ್‌ಟ್ಯೂಯಂಟ್ ಅಸೆಂಬ್ಲಿಗೆ ಮೈಸೂರಿನಿಂದ ಹೋಗಬೇಕಾದ ಜುನಾಯಿತ ಪ್ರತಿನಿಧಿಗಳನ್ನು (ಮೂವರು) ಚುನಾಯಿಸುವ ಸಲುವಾಗಿ ಶಾಸನ ಸಭೆಗಳ ಸಂಯುಕ್ತ ಅಧಿವೇಶನವು ಜುಲೈ 5 ನೇ ತಾರೀಖು ನಡೆಯುವುದೆಂದು ಗೊತ್ತಾಗಿದೆ.

ವು ಡ್ ಲ್ಯಾ ಂ ಡ್ಸ್

ತಾ|| 22-6-47 ರಿಂದ

ಜನಭರಿತವಾದ 8 ನೇ ವಾರ

ಪ್ರತಿದಿನ 3 ಆಟಗಳು

* ಟಿ.ಆರ್. ಮಹಾಲಿಂಗಂ
* ಬಿ. ಆರ್. ಪಂತಲು
* ಸಾರಂಗಪಾಣಿ
* ಬೇಬಿ ಕಮಲ

ಪಾತ್ರವಹಿಸಿರುವ

ನಾವು ಇಬ್ಬರು

ಬ

(ಪೂರ್ತಿ)

ಹೈದರಾಬಾದು ಸ್ವಾತಂತ್ರ್ಯಕ್ಕಾಗಿ ವರದ ಅಲ್ಲಿ ಮುಸ್ಲಿಂರು ಕಾದಾಟಕ್ಕೂ ಸಿದ್ಧ

ಹೈದರಾಬಾದು ಜೂ 19— ಹೈದರಾಬಾದು ಬ್ರಿಟಿಷರೊಂದಿಗೆ ಮಾಡಿಕೊಂಡಿರುವ ಒಪ್ಪಂದದಲ್ಲಿ ಅದರ ಸ್ವಾತಂತ್ರ್ಯವು ಐತಿಹಾಸಿಕವಾದದೆಂದೂ, ಅದು ಬ್ರಿಟಿಷರು ಗೆದ್ದಿದ್ದಲ್ಲವೆಂದೂ, ಹೈದರಾಬಾದು ಯಾವಾಗಲೂ ಸ್ವತಂತ್ರವಾಗಿಯೇ ಇರುವುದೆಂದೂ, ಬ್ರಿಟಿಷರ ಅಧೀನರಾಜ್ಯವಲ್ಲವೆಂದೂ, ಅದರ ಸ್ವಾತಂತ್ರ್ಯ ಕಾಪಾಡಲು ಅವಶ್ಯಕವಿದ್ದರೆ ಅಲ್ಲಿಯ ಮುಸ್ಲಿಂರು ಶಸ್ತ್ರ ಸಜ್ಜಿತರಾಗಿ ಎದುರಿಸಲು ಸಿದ್ಧರೆಂದೂ ಮಜ್ಲಿಸ್ ಸಂಘದ ಡೈರೆಕ್ಟ್ ಆಕ್ಷನ್ ಕಮಿಟಿಯು ಅಧ್ಯಕ್ಷರಾದ ವಿ|| ಅಬ್ದುರೂಫರು ನುಡಿದಿದ್ದಾರೆ.

ಲಾಹೋರು ಜೂ 19 — ಪಂಜಾಬು ವಿಭಜನೆ ಸಂಬಂಧವಾಗಿ ಪಂಜಾಬ್ ನ್ಯಾಷನಲ್ ಬ್ಯಾಂಕಿನವರು ತಮ್ಮ ರಿಜಿಸ್ಟರ್ಡ್ ಆಫೀಸನ್ನು ಲಾಹೋರಿನಿಂದ ಅಲ್ಲಿಗೆ ಬದಲಾಯಿಸುವ ಠರಾವನ್ನು ಅಂಗೀಕರಿಸಿ, ಲಾಹೋರು ಹೈಕೋರ್ಟಿನವರು ಇದಕ್ಕೆ ಅನುಮತಿ ಕೊಟ್ಟಿದ್ದಾರೆ.

ಂ ಂ

ನ್ಯೂಯಾರ್ಕ್ ಜೂನ್ 20 — ಅಮೇರಿಕಾ ಹಡಗು ಕೆಲಸಗಾರರ ಮುಷ್ಕರ ಮುಕ್ತಾಯಗೊಂಡಿದೆ.

ಂ ಂ

ಮದರಾಸು ಜೂನ್ 20 — ಯುದ್ಧಾನಂತರ ಸುಧಾರಣೆಯಲ್ಲಿ ಸರಕಾರದವರು 150 ಆರೋಗ್ಯ ಕೇಂದ್ರಗಳನ್ನು 25 ತಾಲ್ಲೂಕುಗಳಲ್ಲಿ ಸ್ಥಾಪಿಸಲಿರುವರು.

ಇಂದಿನ ವರ್ತಮಾನ

ಇಸ್ತಂಬಾಲ್ ಜೂನ್ 18 — ಟರ್ಕಿ ಸಂಯುಕ್ತ ಅಮೇರಿಕಾದಿಂದ ಕೊಂಡ 11 ಎಳ್ ಕ್ರಾಫ್ಟ್‌ಗಳು ಟರ್ಕಿಗೆ ತಲಪಿವೆ

ಲಂಡನ್ ಜೂನ್ 19 — ಐರಿಷ್ ಡರ್ಬಿಯಲ್ಲಿ ಒರೋಡಾ ಮಹಾರಾಜರ್ ಕುದುರೆ ಸಯ್ಯಾಜೆಂಟ್ ಓಡುವುದೆ.

ಬೆಂಗಳೂರು ಜೂನ್ 20 — ನಿನ್ನೆ ಕಾಂಗ್ರೆಸ್ ಕಾರ್ಯಕಾರೀ ಸಭೆಯಲ್ಲಿ ಮೈಸೂರು ಸಂಸ್ಥಾನದಲ್ಲಿ ತಾತ್ಕಾಲಿಕ ಸರಕಾರವು ಕೂಡಲೇ ಸ್ಥಾಪಿತವಾಗದೇಕೆಂದು ನಿರ್ಣಯಿಸಲಾಗಿದೆ.

ನ್ಯಾಯವಿಧಾಯಕ ಸಭೆ

ಸ್ಪೆಂ ಎ ಸು | ಬೆಂ ಜೂನ್ 20

ವಿಶ್ವವಿದ್ಯಾನಿಲಯ ಸಂಘದ 5 ನೆಯ ವಿದ್ಯಾರ್ಥಿಗಳ ಮೇಲೆ ವಿಶ್ವವಿದ್ಯಾನಿಯವರು ಕ್ರಮ ತೆಗೆದು ಕೊಂಡಿರುವ ವಿಚಾರದಲ್ಲಿ, ಬೆಂಗಳೂರು ಕುದುರೆ ಜೂಜಿನ ಸಂಬಂಧದಲ್ಲಿ, ಮತ್ತು ಕೋಲಾರದಲ್ಲಿ 'ಇಂಟರ್‌ಮಿಡಿಯೇಟ್' ಕಾಲೇಜ್ ಸ್ಥಾಪನೆ ಸಂದರ್ಭದಲ್ಲಿ ಬಂದಿದ್ದ ನಿಲುವಳಿ ಸೂಚನೆಗಳನ್ನು ಅಧ್ಯಕ್ಷರು ತಳ್ಳಿಹಾಕಿದವು.

ಬಡ್ಜೆಟ್ ಮೇಲಿನ ಚರ್ಚೆಗಳಲ್ಲಿ ಜವಾಬ್ದಾರಿ ಸರಕಾರವೇರ್ಪಡಬೇಕೆನ್ನುವ, ಲಂಚ ರುಶುವತ್ತು ತಪ್ಪಿಸಬೇಕೆನ್ನುವ ವ್ಯವಸಾಯ, ವಿದ್ಯಾಬ್ಯಾಸ ಅಭಿವೃದ್ಧಿಯಾಗಬೇಕೆಂಬ ವಿಚಾರಗಳು ಹೊರಬಿದ್ದವು.

ಗಿಡ್ಡಾದ ಎತ್ತುಗಳು

ಸಿಲೋನಿನ ಪಶುಗಳಲ್ಲಿ ಒಂದು ಆಶ್ಚರ್ಯವಿದೆ. ಅದು ಏನೆಂದರೆ ಅಲ್ಲಿರುವ ಒಂದು ಜಾತಿಯ ಎತ್ತುಗಳು ಅತಿ ಗಿಡ್ಡಾಗಿರುತ್ತವೆ. ಅವುಗಳ ಎತ್ತರವು 30 ಅಂಗುಲಗಳಿಗಿಂತ ಹೆಚ್ಚಾಗಿರುವದಿಲ್ಲ. ತೂಕ ಸುಮಾರು 11ರ ಪೌಂಡು ಅವು ಬಹಳ ವೇಗವಾಗಿ ನಡೆಯುತ್ತವೆ. ದಿನಕ್ಕೆ 100 ಮೈಲು ಹೋಗಬಲ್ಲವು. 100 ಮೈಲುಗಳೊಳಗೆ ಅವುಗಳಿಗೆ ಆಹಾರ ಬೇಕಾಗಿರುವದಿಲ್ಲ. ನೀರೂ ಬೇಕಾಗಿರುವದಿಲ್ಲ. ಸುಮಾರು 1000 ವರ್ಷಗಳಿಂದ ಸಿಲೋನ್ ಮತ್ತು ಇತರ ಬುದ್ಧ ಮತೀಯರ ದೇಶಗಳಲ್ಲಿ ಇದು ಪ್ರಖ್ಯಾತವಾಗಿದೆ.

ವಾರ್ತಾ ಪತ್ರಿಕೆಗಳು

1 ಪ್ಯಾರಿಸ್ಸಿನಲ್ಲಿ ರಬ್ಬರ್ ಕಾಗದದ ಮೇಲೆ ವರ್ತಮಾನ ಪತ್ರಿಕೆಯನ್ನು ಹಿಂದೆ ಹೊರಡಿಸುತ್ತಿದ್ದರು. ಕಾರಣ ಸ್ನಾನಮಾಡುವ ತೊಟ್ಟಿಯಲ್ಲಿ ಕೂತು ಕೊಂಡೇ ಓದಲಿಕ್ಕಾಗಿ.

2 ಮತ್ತೊಂದು ಪತ್ರಿಕೆಯು ಪ್ಯಾರಿಸ್ಸಿನಲ್ಲಿ ವಾಟರ್‌ಪ್ರೂಫ್ ಕಾಗದದಲ್ಲಿ ಪ್ರಿಂಟು ಮಾಡಲ್ಪಡುತ್ತಿತ್ತು.

3 ಪ್ಯಾರಿಸ್ಸಿನಲ್ಲಿಯೇ ಒಂದು ಪತ್ರಿಕೆಯು ಕೇವಲ ಪದ್ಯ ರೂಪದಲ್ಲಿ ಹೊರಡಿಸಲ್ಪಡುತ್ತಿತ್ತು. 15 ವರ್ಷಗಳಲ್ಲಿ ಅದು ಪ್ಯಾರಿಸ್ಸು ಸಮಾಚಾರವನ್ನೂ 125000 ಪದ್ಯಗಳಲ್ಲಿ ತಿಳಿಸಿತ್ತು.

4 ಮತ್ತೊಂದು ಪ್ಯಾರಿಸ್ಸು ಪತ್ರಿಕೆಯು ಹೆಸರು 'ಕರವಸ್ತ್ರ' ಓದಿದ ಮೇಲೆ ಕರವಸ್ತ್ರದಂತೆ ಉಪಯೋಗಿಸಬಹುದಾಗಿತ್ತು.

5 ಇಂಗ್ಲೆಂಡಿನಲ್ಲಿ ಪಿಯರ್ಸ್ ಎಂಬ್ಲಿ ಪತ್ರಿಕೆಯನ್ನು ಇತ್ತೀಚ್ಯಯುಂಜಾ ಕಾಲದಲ್ಲಿ ಆಮೂಕಿ ಲೆಪ್ಪಸ್ ಎಣ್ಣೆಯಲ್ಲಿ ಕಾಗದಗಳನ್ನು ನೆನೆಸಿ ಪ್ರಿಂಟು ಮಾಡುತ್ತಿದ್ದರು. ಗ್ರೀನಾಕ್ ನ್ಯೂಸ್ ಕ್ಲಾತ್ ಎಂಬ ಪತ್ರಿಕೆಯು ಬಟ್ಟೆಯ ಮೇಲೆ ಪ್ರಿಂಟು ಮಾಡಲ್ಪಡುತ್ತಿತ್ತು.

6 ಡೈಲಿ ಪಿಲಟ್ ಎನ್ನುವದು ಪ್ರಪಂಚದಲ್ಲಿ ಇಂದಿನ ಕಾಲದ ಅತಿ ಸಣ್ಣ ಪತ್ರಿಕೆ. ಕಾಗದದ ಒಂದೇ ಕಡೆಯಲ್ಲಿ ಪ್ರಿಂಟು ಮಾಡಲ್ಪಡುತ್ತಿತ್ತು. ಉದ್ದ 18 ಅಂಗುಲ. ಬಿಮ್ಮು ಬಗಲ್ ಎಂಬ ಪತ್ರಿಕೆಯು ಉದ್ದ ೪|| ಅಂಗುಲ. ಅಗಲ ಮೂರು ಎಂಟನೆ ಒಂದು ಅಂಗುಲ. ಕ್ವಾಡ್ರುವಲ್ ಕಾಂಸ್ಟಬ್ಲೇಷ್ ಎಂಬ ಪತ್ರಿಕೆಯು ಉದ್ದ ೪|| ಅಡಿ ಇದೆ ಲ 6 ಅಡಿ, ಇದು ಶತಮಾನಕ್ಕೆ ಒಂದು ಬಾರಿ ಹೊರಡುತ್ತದೆ.

ಇಂಡೋನೇಷಿಯಾ

ಇಂಡೋನೇಷಿಯಾದಿಂದ ಡಚ್ ಸೇನೆಗಳನ್ನು ಕೂಡಲೇ ತೊಲಗಿಸ ಬೇಕೆಂದೂ ಇಂಡೋನೇಷಿಯಾದ ಪರಿಸ್ಥಿತಿಯಲ್ಲಿ ರಿಪಬ್ಲಿಕ್ ಸರ್ಕಾರಕ್ಕೆ ಎಲ್ಲಾ ಅಧಿಕಾರಗಳನ್ನೂ ಕೊಡಬೇಕೆಂ ಕೆಂದೂ, ವಿದೇಶಾಂಗ ಶಾಖೆಯ ಆರ್ಥಿಕ ವ್ಯವಹಾರಗಳು ತಾವೆ ಇವು ಈ ಸರಕಾರದ ಅಧೀನವೇ ಆಗಬೇಕೆಂದೂ ರಿಪಬ್ಲಿಕನ್ನರು ಡಚ್ಚರೊಂದಿಗೆ ನಡೆಸಿದ ರಾಜೀ ಸಂಧಾನಗಳಲ್ಲಿ ಸೂಚಿಸಿದ ರು. ಆದರೆ ಇವುಗಳಲ್ಲಿ ಒಂದಕ್ಕೂ ಡಚ್ ಸರಕಾರ ಅಂಗೀಕಾರಕೊಡಲಿಲ್ಲ.

ಈಚೆಗೆ ಡಚ್ಚರು ಹಿಂದು ಪ್ರತಿಪಾದಿಸುವುದನ್ನು ಮೂಡಿದರು ಅದರಂತೆ 1949 ರವರೆಗೂ ಇಂಡೋನೇಷಿಯಾದಲ್ಲಿ ತಾತ್ಕಾಲಿಕ ಫೆಡರಲ್ ಸರ್ಕಾರವು ಏರ್ಪಡಬೇಕಾಗಿದ್ದು. ಇದಕ್ಕೆ ಡಾ॥ ಸುಕರ್ ಮತ್ತು ಅತನ ರಾಷ್ಟ್ರೀಯ ರಿಪಬ್ಲಿಕ್ ಸರಕಾರದವರು ಅಂಗೀಕರಿಸಿದರು. ಆದರೆ ಲಿಂಗಡ್ ಜಾತಿ ಒಡಂಬಿಕೆಯಂತೆ ಈ ಸರಕಾರವು ಜಾತೀಯವಾಗಿರಬೇಕೆಂದೂ, ಇಂಡೋನೇಷಿಯಾನ್ ಐಸ್ಟೆ ಟೆಡ್ ಸ್ಟೇಟ್ಸ್ ಎಂಬ ಸರಕಾರವು ಏರ್ಪಡಲು ಇದ್ದು ಆಸ್ಥಿತ್ವಕ್ಕೆ ಬರಬೇಕೆಂದೂ ಇರುವುದೆಂದೂ ರಿಪಬ್ಲಿಕನ್ನರು ಸೂಚಿಸಿದರು. ಡಚ್ಚರು ರಿಪಬ್ಲಿಕನ್ನರ ಸಲಹೆಗಳನ್ನು ಅಂಗೀಕರಿಸಿದಲ್ಲಿ ಉತ್ತಮ. ಹಾಗಿಲ್ಲದಿದ್ದಲ್ಲಿ ಪೂರ್ವ ದೇಶಗಳಲ್ಲಿ ಹತ್ತಿಕೊಂಡಿರುವ ಈ ಜ್ವಾಲೆಯು ಅತಿ ಜಾಗ್ರತೆಯಲ್ಲಿ ಪ್ರಪಂಚದಲ್ಲೆಲ್ಲಾ ಹರಡಬಹುದು.

ಉಪನ್ಯಾಸ

ಮೈಸೂರು ಸಿಟಿ ಕೋ ಆಪರೇಟಿವ್ ಬ್ಯಾಂಕಿನ ಸಹಕಾರ ಶಿಕ್ಷಣ ಸಮಿತಿಯ ಜಯಂತಿಯಲ್ಲಿ ತಾ|| 23-6-47 ನೇ ಸೋಮವಾರ ಸಾಯಂಕಾಲ ೪-15 ಘಂಟೆಗೆ ಶ್ರೀ. ಬನುಮಯ್ಯನವರ ಹೈಸ್ಕೂಲ್ ಹಬ್ಬದಲ್ಲಿ ಮಹಾರಾಜಾ ಕಾಲೇಜ್ ನಿವೃತ್ತ ಸಂಸ್ಕೃತ ಪ್ರೊಫೆಸರ್ ಆದ ವಿದ್ವಾನ್ ಸಿ. ಆರ್. ನರಸಿಂಹ ಶಾಸ್ತ್ರಿ ಎಂ. ಎ. ಅವರು 'ಸಹಕಾರ ತತ್ವ ಮತ್ತು ಸಾಮುಕಾರಣ' ಎಂಬ ವಿಷಯವನ್ನು ಕುರಿತು ಉಪನ್ಯಾಸ ಮಾಡುತ್ತಾರೆ. ಸರ್ವರಿಗೂ ಆಹ್ವಾನ ವುಂಟು.

Public Auction

One Maginus Lorry of Diesel Engine, Four Cylinders 32 H. P. running condition, capable of carrying heavy loads upto 4 tons, will be sold by public auction on 30th June 1947 at 4 p.m. in the Municipal Offices, Mysore

For particulars please apply to the President, City Municipal Council, Mysore.

R. Ramachandra Rao Bhombore
President
City Municipal Council, Mysore.

ಹ ರಾ ಜು

ಡಿಸೆಲ್ ಇಂಜಿನ್, ಫೋರ್ ಸಿಲಿಂಡರ್‌ಗಳುಳ್ಳ ಮೆಜೆಸಿಸ್ ಲಾರಿಯನ್ನು ಮುನಿಸಿಪಲ್ ಆಫೀಸ್ ಕಾಂಪೌಂಡಿನಲ್ಲಿ ತಾ|| 30-6-47 ನೇ ಸಾಯಂಕಾಲ 4 ಗಂಟೆಗೆ ಹರಾಜು ಮಾಡಲ್ಪಡುತ್ತೆ. ಇಷ್ಟವುಳ್ಳವರು ಒಂದು ಸಾರಿ ಪರಿಶೀಲಿಸಿ ಕೊಳ್ಳಬಹುದು.

ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳ ಬಹುದು, ಅಥವಾ ರೂಬ್ ರೂಬ್ ಹಾಜರಾಗಿ ತಿಳಿದುಕೊಳ್ಳಬಹುದು,

(ಸಹಿ) ಆರ್. ರಾಮಚಂದ್ರರಾವ್ ಭೊಂಬೋರೆ
ಪ್ರೆಸಿಡೆಂಟ್
ಸಿಟಿ ಮುನಿಸಿಪಲ್ ಕೌನ್ಸಿಲ್, ಮೈಸೂರು

At Opera 10th Glorious Week

RAJAKUMARI

ಟಿ. ಎಸ್. ಬಾಲಯ್ಯ, ಶಶಿಮಣಿದೇವಿ, ಮಾಲತಿ ರಾಮಚಂದ್ರ ನಟಿಸಿರುವ

ರಾ ಜ ಕು ಮಾ ರಿ

(ತ ಮಿ ಳು)

ಶ್ರೀ 'ಓಂ' ಗುರುತಿನ

ಅ ರಿ ಸಿ ದ ಪ ರಿ ಶು ದ್ಧ ಕೇ ಸ ರಿ



ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯೆ ಕೇಪರಿಗಿಡಗಳಿಂದ ಅರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಅರಿಸಿ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಏನೆಂದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೇವಾಲಯಗಳಲ್ಲಿಯಾಗಿ ದೇವರ ಪೂಜೆಗೂ ಮತ್ತಾಚಾರ ಸಮಾರಂಭಗಳಲ್ಲಿಯೂ ಎಲ್ಲ ಸಂತೋಷ ಮತ್ತು ಸಾಂಘಿಕ ಕೂಟಗಳಲ್ಲಿಯೂ ಉಪಯೋಗಿಸಲ್ಪಡತಕ್ಕ ದ್ದಾಗಿದೆ. ಎಂದು ವಿಶ್ವಾಸ ಮಾಡಲ್ಪಟ್ಟಿದೆ

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಣ ವ್ಯಾಪಾರಿಗಳು)

ಗೋವಿಂದಪ್ಪ ಪಾಯಕ್ ರಸ್ತೆ, ಜಿ. ಟಿ. ಮದರಾಸು.

SHAKTI SUDHA

A Superb TONIC

'ಶಕ್ತಿಸುಧಾ' ಸೇವಿಸಿ ಶಕ್ತಿಯನ್ನು ಹೊಂದಿ

Edited, Printed and Publishedby M. S Krishna Rao at the Satyvadi Press Chamara Agrahar, Mysore.